ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ದಿನಾಂಕ:18.03.2019 ರಂದು ಅಪರಾಹ್ನ 12:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಅಪ ಇಲಾಖೆಯ ಸಕಾಲ ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಿಸುವ ಬಗ್ಗೆ ಜರುಗಿದ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)</u>

1. ಎಲ್.ಕೆ. ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
2. ಎಂ.ಕೆ. ಕೆಂಪೇಗೌಡ, ನಿರ್ದೇಶಕರು(ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
3. ಎಸ್.ಎಂ. ಜುಲ್ಫಿಖಾರ್‌ಉಲ್ಲಾ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
4. ಪಿ.ಎಸ್. ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
7. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
8. ನಿತಿನ್ ನಾಯ್ಕ್, ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
9. ನಾಗೇಂದ್ರ, IEC Co-ordinator, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಇಲಾಖೆ, ಬೆಂಗಳೂರು.

ನಿರ್ದೇಶಕರು (ಇ-ಆಡಳಿತ)(ಪ್ರ), ಗ್ರಾಅಪ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು ಹಾಗೂ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನದಂತೆ ಈ ಕೆಳಕಂಡ ವಿಷಯಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಯಿತು.

1. ಪ್ರಸ್ತುತ ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 11 ಸಕಾಲ ಸೇವೆಗಳನ್ನು ಪಂಚತಂತ್ರ ತಂತ್ರಾಂಶದ ಮೂಲಕ ಸೇವೆಗಳ ಸ್ವೀಕೃತಿ ಮತ್ತು ದೃಢೀಕರಣವನ್ನು ನೀಡಲಾಗುತ್ತಿದೆ ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿರವರ ಆದೇಶದಂತೆ ಸಕಾಲ ಸೇವೆಗಳ Back end process ನ್ನು ವಿನ್ಯಾಸಗೊಳಿಸುವುದು ಮತ್ತು ಸದರಿ ಸೇವೆಗಳನ್ನು Online ಮೂಲಕ ವಿತರಿಸುವ ಅವಶ್ಯಕತೆ ಇರುತ್ತದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.
2. ಅದರಂತೆ, ಈಗಾಗಲೇ ಕೆಲವೊಂದು ಸೇವೆಗಳ Back end process ನ್ನು ಪಂಚತಂತ್ರ ತಂತ್ರಾಂಶದಲ್ಲಿ ವಿನ್ಯಾಸಗೊಳಿಸಲಾಗಿದ್ದು, ಪ್ರಮಾಣ ಪತ್ರಗಳ ವಿತರಣೆಯಲ್ಲಿ ಏಕರೂಪತೆ ತರುವ ಉದ್ದೇಶದಿಂದ ಪ್ರಮಾಣ ಪತ್ರಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಅದರಂತೆ ವಿನ್ಯಾಸಗೊಳಿಸಿದ Back end process ನ ವಿವರಣೆಯನ್ನು ನೀಡಲು ಮಾನ್ಯ ಪ್ರಧಾನ ಕಾರ್ಯದರ್ಶಿರವರು ರಾಜ್ಯ ಯೋಜನಾ ವ್ಯವಸ್ಥಾಪಕರಿಗೆ ಸೂಚಿಸಿದರು.
3. <u>ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಮತ್ತು ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ನಿರ್ವಹಿಸಬೇಕಾದ ಇತರ ದಸ್ತಾವೇಜುಗಳನ್ನು ನೀಡುವುದು.</u> ಸೇವೆಯ Back end process ನ್ನು ಸಭೆಗೆ ವಿವರಿಸಲಾಯಿತು. ಸದರಿ ಸೇವೆಯನ್ನು ಪಡೆಯುವಾಗ ಅರ್ಜಿ ನಮೂನೆಯಲ್ಲಿ ಅರ್ಜಿದಾರರ ಆಸ್ತಿಗಳ ವಿವರಗಳನ್ನು ಮತ್ತು ಯಾವುದೇ ದಾಖಲೆಯನ್ನು ಗ್ರಾಮ ಪಂಚಾಯತ್‌ಗಳಿಗೆ ಒದಗಿಸುವುದು ಅವಶ್ಯಕತೆ ಇಲ್ಲದೇ ಇರುವುದರಿಂದ ಅರ್ಜಿಯ ನಮೂನೆಯಲ್ಲಿ ಆಸ್ತಿಗಳ ವಿವರಗಳನ್ನು ಮತ್ತು ದಾಖಲೆಗಳನ್ನು ಅಪ್ಲೋಡ್ ಮಾಡುವ ಆಯ್ಕೆಯನ್ನು ತೆಗೆದು ಹಾಕಲು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ತಿಳಿಸಿದರು.

ಸದರಿ ಸೇವೆಗೆ ಸಂಬಂಧಪಟ್ಟಂತೆ, ಬೆಳೆಗಣತಿಯ ಯಾವುದೇ ದಾಖಲೆಗಳನ್ನು ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸದೇ ಇರುವುದರಿಂದ ಸೇವೆಯ ಹೆಸರಿನಲ್ಲಿ ಬೆಳೆಗಣತಿಯನ್ನು ತೆಗೆದು ಹಾಕಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕ್ರಮ: ನಿರ್ದೇಶಕರು(ಪಂ.ರಾಜ್-1)**

4. **ಕುಡಿಯುವ ನೀರಿನ ನಿರ್ವಹಣೆ, ಗ್ರಾಮ ನೈರ್ಮಲ್ಯ ನಿರ್ವಹಣೆ ಮತ್ತು ಬೀದಿ ದೀಪಗಳ ನಿರ್ವಹಣೆ**ಯ Back end process ಮತ್ತು ಪ್ರಮಾಣ ಪತ್ರಗಳ ನಮೂನೆಗಳು ಸಿದ್ಧವಾಗಿದ್ದು, ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
5. **ಕಟ್ಟಡ ಲೈಸೆನ್ಸ್ ಮತ್ತು ಸಾಮಾನ್ಯ ಲೈಸೆನ್ಸ್ (ವಾಣಿಜ್ಯ ಲೈಸೆನ್ಸ್)** ಸೇವೆಗಳ Back end process ಸಿದ್ಧವಾಗಿದೆ ಮತ್ತು ಸದರಿ ಸೇವೆಗಳ ಪ್ರಮಾಣ ಪತ್ರಗಳನ್ನು ಪಂಚಾಯತ್ ರಾಜ್-1 ಶಾಖೆಯಿಂದ ದೃಢೀಕರಿಸಿಕೊಳ್ಳಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ಮಾತನಾಡುತ್ತಾ, ಸದರಿ ಸೇವೆಗಳಿಗೆ ಇ-ಸ್ವತ್ತು ತಂತ್ರಾಂಶದ Property id ಗಳನ್ನು ಕಡ್ಡಾಯಗೊಳಿಸಲು ಸಭೆಗೆ ತಿಳಿಸಿದರು. ಅದರಂತೆ ಇ-ಸ್ವತ್ತು property Id ಯನ್ನು ಕಡ್ಡಾಯಗೊಳಿಸಲು ತೀರ್ಮಾನಿಸಲಾಯಿತು.

**ಕ್ರಮ:ನಿರ್ದೇಶಕರು(ಇ-ಆಡಳಿತ)**

6. **ಕಟ್ಟಡ ಲೈಸೆನ್ಸ್ ಮತ್ತು ಸಾಮಾನ್ಯ ಲೈಸೆನ್ಸ್ (ವಾಣಿಜ್ಯ ಲೈಸೆನ್ಸ್)** ಸೇವೆಯನ್ನು ಕನ್ನಡ ಅವತರಣಿಕೆಯಲ್ಲಿ ಕಟ್ಟಡ ಪರವಾನಗಿ ಮತ್ತು ವಾಣಿಜ್ಯ ಪರವಾನಗಿ ಎಂದು ಮರುನಾಮಕರಣಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕ್ರಮ: ನಿರ್ದೇಶಕರು(ಪಂ.ರಾಜ್-1)**

7. **ESCOM ನಿರಾಕ್ಷೇಪಣ** ಪ್ರಮಾಣ ಪತ್ರ ಸೇವೆಯ Back end process ಮತ್ತು ಪ್ರಮಾಣ ಪತ್ರಗಳು ಸಿದ್ಧವಾಗಿದ್ದು, ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
8. **ಕರ ನಿರ್ಧರಣಾ ಪಟ್ಟಿಯ ಬದಲಾವಣೆ ಸೇವೆ**ಯನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ವಿತರಿಸಲಾಗುತ್ತಿದ್ದು, ಪಂಚತಂತ್ರ ಮತ್ತು ಸಕಾಲ ತಂತ್ರಾಂಶಕ್ಕೆ ನೇರವಾಗಿ Integrate ಆಗದೇ ಇರುವುದನ್ನು ಮತ್ತು ಪ್ರಸ್ತುತ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತ್ಯೇಕವಾಗಿ ಸದರಿ ಸೇವೆಯ ಸ್ವೀಕೃತಿ ಮತ್ತು ದೃಢೀಕರಣವನ್ನು ಅಳವಡಿಸುತ್ತಿದ್ದಾರೆ ಎಂಬುದನ್ನು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

ಕರ ನಿರ್ಧರಣಾ ಪಟ್ಟಿಯ ಬದಲಾವಣೆ ಸೇವೆಯ ಅರ್ಜಿಯನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಪಡೆದುಕೊಳ್ಳುವ ಬದಲು ಪಂಚತಂತ್ರ ತಂತ್ರಾಂಶದಲ್ಲಿ ಪಡೆದುಕೊಳ್ಳುವ ಹಾಗೆ ಮತ್ತು ಪ್ರಮಾಣ ಪತ್ರ ವಿತರಣೆಯನ್ನು ಪಂಚತಂತ್ರ ತಂತ್ರಾಂಶದ ಮೂಲಕ ನೀಡುವ ಹಾಗೆ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಮಾಡಲು ಮಾನ್ಯ ಪ್ರಧಾನ ಕಾರ್ಯದರ್ಶಿರವರು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು. ಇದರಿಂದಾಗಿ ಪಂಚತಂತ್ರ ತಂತ್ರಾಂಶದಲ್ಲಿ ಮಾಡುವ updations ಸಕಾಲ ತಂತ್ರಾಂಶದಲ್ಲಿಯೂ ಪ್ರತಿಬಿಂಬಿಸುತ್ತದೆ.

**ಕ್ರಮ: NIC**

...3

9. ಕರ ನಿರ್ಧರಣಾ ಪಟ್ಟಿಯ ಬದಲಾವಣೆ ಸೇವೆಯ ಹೆಸರನ್ನು ಕರ ನಿರ್ಧರಣಾ ಪಟ್ಟಿಯ ಬದಲಾವಣೆ (ಹಕ್ಕುಗಳ ಬದಲಾವಣೆ) ಎಂದು ಮರುನಾಮಕರಣಗೊಳಿಸಲು ಹಾಗೂ ಅದರಂತೆ, ಆಂಗ್ಲ ಅವತರಣಿಕೆಯಲ್ಲಿ Alteration to Assessment list ಅನ್ನು Alteration to Assessment list (Change of Rights) ಎಂದು ಬದಲಾವಣೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕ್ರಮ:ನಿರ್ದೇಶಕರು(ಪಂ.ರಾಜ್-1)**

10. **ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕಾರ್ಯನಿರ್ವಹಿಸಿದ್ದಕ್ಕಾಗಿ ಇ-ಪಾವತಿ** ಸೇವೆಯನ್ನು Online ಮೂಲಕ ನೀಡಲು ಸಾಧ್ಯವಿಲ್ಲದೇ ಇರುವುದರಿಂದ ಹಾಗೂ ಸದರಿ ಸೇವೆಯ Back end process ನ್ನು ವಿನ್ಯಾಸಗೊಳಿಸಲು ಸಾಧ್ಯವಿಲ್ಲದೇ ಇರುವುದರಿಂದ ಸೇವೆಯನ್ನು ಸಕಾಲದಿಂದ ಕೈಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

**ಕ್ರಮ:ನಿರ್ದೇಶಕರು(ಪಂ.ರಾಜ್-1)**

11. **ಅಕುಶಲ ಕಾರ್ಮಿಕರಿಗೆ ಉದ್ಯೋಗ ಚೀಟಿಯನ್ನು ಒದಗಿಸುವುದು(ಎಂಜಿಎನ್ಆರ್ಇಜಿಎಸ್)** ಮತ್ತು **ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು(ಎಂಜಿಎನ್ಆರ್ಇಜಿಎಸ್)** ಸೇವೆಗಳನ್ನು end2endnrega ತಂತ್ರಾಂಶದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಸದರಿ ಸೇವೆಗಳ ಸ್ವೀಕೃತಿಯನ್ನು ದೂರವಾಣಿ ಮೂಲಕ ಸ್ವೀಕರಿಸಲಾಗುತ್ತಿದೆ ಎಂದು IEC Co-Ordinator, NREGA ರವರು ಸಭೆಗೆ ತಿಳಿಸಿದರು.

ಸದರಿ ಸೇವೆಗಳ ಸ್ವೀಕೃತಿ ಮತ್ತು ದೃಡೀಕರಣವನ್ನು ಪಂಚತಂತ್ರ ಮತ್ತು ಸಕಾಲ ತಂತ್ರಾಂಶಗಳಲ್ಲಿ ಪಡೆಯುವಂತೆ ತಂತ್ರಾಂಶಗಳ ಸಂಯೋಜನೆ ಮಾಡಲು ಮಾನ್ಯ ಪ್ರಧಾನ ಕಾರ್ಯದರ್ಶಿ ರವರು ಸಭೆಗೆ ಸೂಚಿಸಿದರು.

**ಕ್ರಮ: ಆಯುಕ್ತರು, ಎಂಜಿಎನ್ಆರ್ಇಜಿಎ, ನಿರ್ದೇಶಕರು(ಇ-ಆಡಳಿತ), NIC.**

12. ನಮೂನೆ-9 ಪ್ರತಿ(Providing the copy of Form 9) ಮತ್ತು ನಮೂನೆ-11 ಪ್ರತಿ(Providing the copy of Form 11) ಸೇವೆಗಳು ಸಕಾಲ ತಂತ್ರಾಂಶದಲ್ಲಿ ಲಭ್ಯವಿಲ್ಲದೇ ಇದ್ದು, ಈವರೆಗೆ ಸದರಿ ಸೇವೆಗಳನ್ನು ಸಕಾಲ ಅಧಿನಿಯಮದಲ್ಲಿ ಸೇರ್ಪಡೆಯಾಗದೇ ಇರುವುದಾಗಿ ಸಭೆಯ ಗಮನಕ್ಕೆ ತಂದರು.

ನಮೂನೆ-9 ಪ್ರತಿ (Providing the copy of Form 9) ಸೇವೆಯನ್ನು ನಮೂನೆ-9 ಅಥವಾ 11A ಯನ್ನಾಗಿ ನಮೂನೆ-11 ಪ್ರತಿ(Providing the copy of Form 11) ಸೇವೆಯನ್ನು ನಮೂನೆ-11B(Form 11 B) ಯನ್ನಾಗಿ ಬದಲಾವಣೆ ಮಾಡಿ ಸಕಾಲ ಅಧಿನಿಯಮದಲ್ಲಿ ಹೊಸ ಸೇವೆಗಳನ್ನು ಸೇರ್ಪಡೆಮಾಡಲು ಕ್ರಮಕೈಗೊಳ್ಳಲು ನಿರ್ದೇಶಕರು(ಪಂ.ರಾಜ್-1) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸೂಚಿಸಿದರು.

**ಕ್ರಮ:ನಿರ್ದೇಶಕರು(ಪಂ.ರಾಜ್-1)**

13. ಸಕಾಲ ಸೇವೆಗಳ Back end process ನ್ನು ಅಳವಡಿಸಲು ಬೇಕಾದ ಮಾರ್ಪಾಡು ಮತ್ತು ವಿನ್ಯಾಸಗಳನ್ನು ತಂತ್ರಾಂಶಗಳಲ್ಲಿ ದಿನಾಂಕ:25.03.2019 ರೊಳಗೆ ಮಾಡಲು ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸಭೆಗೆ ಸೂಚಿಸಿದರು.

14. ಸಿಆಸುಇ 297 ನಾಸೇಖಾ 2018 (ಭಾಗ-1), ದಿನಾಂಕ:01.03.2018 ರ ಸರ್ಕಾರದ ಆದೇಶದಂತೆ ಸಕಾಲದಡಿ ನೀಡುವ ಸೇವೆಗಳಿಗೆ ವಿತರಿಸುವ ಪ್ರಮಾಣ ಪತ್ರಗಳಿಗೆ ಜಿ.ಎಸ್.ಸಿ. ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವಂತೆ ಸೂಚಿಸಲಾಗಿದೆ. ಅದರಂತೆ ಪ್ರಸ್ತುತ ನೀಡಲಾಗುತ್ತಿರುವ ನಮೂನೆ 9 ಮತ್ತು 11 ಸೇವೆಗಳು ಸೇರಿದಂತೆ ಎಲ್ಲಾ

....4

ಸೇವೆಗಳ ಪ್ರಮಾಣ ಪತ್ರಗಳಲ್ಲಿ ಸಕಾಲ ಜಿ.ಎಸ್.ಸಿ. ಸಂಖ್ಯೆಯನ್ನು ಕಡ್ಡಾಯಗೊಳಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

15. ಸರ್ಕಾರದ ಪ್ರಧಾನ ಕಾರ್ಯದರ್ಶಿರವರು ಸಕಾಲ ಸೇವೆಗಳ ಪ್ರಮಾಣ ಪತ್ರಗಳಲ್ಲಿ ಜಿ.ಎಸ್.ಸಿ. ಸಂಖ್ಯೆಗಳನ್ನು ಕಡ್ಡಾಯಗೊಳಿಸಲು ತಂತ್ರಾಂಶಗಳಲ್ಲಿ ಸೂಕ್ತ ಮಾರ್ಪಾಡು ಮಾಡಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ತಂತ್ರಾಂಶಗಳಲ್ಲಿ ಮಾರ್ಪಾಡು ಮಾಡಿದ ನಂತರ ಎಲ್ಲಾ ಸರ್ಕಾರದ ಪ್ರಮಾಣ ಪತ್ರಗಳಲ್ಲಿ ಜಿ.ಎಸ್.ಸಿ. ಸಂಖ್ಯೆ ಹೊಂದಿರುವುದನ್ನು ಕಡ್ಡಾಯ ಮಾಡಲು ಹಾಗೂ ಸಕಾಲ ಜಿ.ಎಸ್.ಸಿ. ಸಂಖ್ಯೆ ಹೊಂದಿಲ್ಲದ ಪ್ರಮಾಣ ಪತ್ರಗಳನ್ನು ಮಾನ್ಯ ಮಾಡದೇ ಇರಲು ಸೂಕ್ತ ಆದೇಶ/ಸುತ್ತೋಲೆ ಹೊರಡಿಸಲು ನಿರ್ದೇಶಕರು(ಪಂ.ರಾಜ್-1) ರವರಿಗೆ ಸೂಚಿಸಿದರು.

**ಕ್ರಮ: ನಿರ್ದೇಶಕರು(ಪಂ.ರಾಜ್-1)**

**ನಿರ್ಣಯಗಳು:**

1. **ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಮತ್ತು ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ನಿರ್ವಹಿಸಬೇಕಾದ ಇತರ ದಸ್ತಾವೇಜುಗಳನ್ನು ನೀಡುವುದು** ಸೇವೆಯ ಅರ್ಜಿ ನಮೂನೆಯನ್ನು ಸರಳೀಕರಣಗೊಳಿಸುವುದು.
2. **ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಮತ್ತು ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ನಿರ್ವಹಿಸಬೇಕಾದ ಇತರ ದಸ್ತಾವೇಜುಗಳನ್ನು ನೀಡುವುದು** ಸೇವೆಯಲ್ಲಿ ಬೆಳೆಗಣತಿಯನ್ನು ತೆಗೆದುಹಾಕುವುದು.
3. **ಕರ ನಿರ್ಧರಣಾ ಪಟ್ಟಿ ಬದಲಾವಣೆ ಸೇವೆಯನ್ನು ಕರ ನಿರ್ಧರಣಾ ಪಟ್ಟಿ ಬದಲಾವಣೆ (ಹಕ್ಕು ಬದಲಾವಣೆ)** ಎಂದು ಮರುನಾಮಕರಣಗೊಳಿಸುವುದು.
4. **ಕರ ನಿರ್ಧರಣಾ ಪಟ್ಟಿ ಬದಲಾವಣೆ** ಸೇವೆಯ ಸ್ವೀಕೃತಿ ಮತ್ತು ಪ್ರಮಾಣ ಪತ್ರ ವಿತರಣೆಯನ್ನು ಇ-ಸ್ವತ್ತು ತಂತ್ರಾಂಶದ ಬದಲಿಗೆ ಪಂಚತಂತ್ರ ತಂತ್ರಾಂಶದಲ್ಲಿ ನೀಡುವುದು.
5. **ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕಾರ್ಯನಿರ್ವಹಿಸಿದ್ದಕ್ಕಾಗಿ ಇ-ಪಾವತಿ** ಸೇವೆಯನ್ನು ಸಕಾಲ ಸೇವೆಗಳಿಂದ ಕೈಬಿಡುವುದು.
6. **ಅಕುಶಲ ಕಾರ್ಮಿಕರಿಗೆ ಉದ್ಯೋಗ ಚೀಟಿಯನ್ನು ಒದಗಿಸುವುದು(ಎಂಜಿಎನ್ಆರ್ಇಜಿಎಸ್)** ಮತ್ತು **ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು(ಎಂಜಿಎನ್ಆರ್ಇಜಿಎಸ್)** ಸೇವೆಗಳ ಸ್ವೀಕೃತಿ ಮತ್ತು ದೃಢೀಕರಣಕ್ಕಾಗಿ end2endnrega ತಂತ್ರಾಂಶವನ್ನು ಪಂಚತಂತ್ರ ಮತ್ತು ಸಕಾಲ ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವುದು.
7. ನಮೂನೆ-9 ಪ್ರತಿ (Providing the copy of Form 9) ಸೇವೆಯನ್ನು ನಮೂನೆ-9 ಅಥವಾ 11A ಯನ್ನಾಗಿ ನಮೂನೆ-11 ಪ್ರತಿ(Providing the copy of Form 11) ಸೇವೆಯನ್ನು ನಮೂನೆ-11B(Form 11 B) ಯನ್ನಾಗಿ ಬದಲಾವಣೆ ಮಾಡಿ ಸಕಾಲ ಸೇವೆಗಳಲ್ಲಿ ಹೊಸದಾಗಿ ಸೇರ್ಪಡೆ ಮಾಡುವುದು.
8. ನಮೂನೆ-9 ಅಥವಾ 11A ಮತ್ತು ನಮೂನೆ-11B ಸೇವೆಯ ಅರ್ಜಿಯನ್ನು ಪಂಚತಂತ್ರ ತಂತ್ರಾಂಶದಲ್ಲೇ ಪಡೆಯುವ ಹಾಗೆ ತಂತ್ರಾಂಶದಲ್ಲಿ ಮಾರ್ಪಾಡು ಮಾಡುವುದು.
9. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಎಲ್ಲಾ ಸಕಾಲ ಸೇವೆಗಳ ಪ್ರಮಾಣ ಪತ್ರಗಳಲ್ಲಿ ಸಕಾಲ(GSC ಸಂಖ್ಯೆ) ಸಂಖ್ಯೆಯನ್ನು ಕಡ್ಡಾಯಗೊಳಿಸುವುದು.

.....5

10. ಸಕಾಲ GSC ಸಂಖ್ಯೆ ಹೊಂದಿಲ್ಲದ ಪ್ರಮಾಣ ಪತ್ರಗಳನ್ನು ಮಾನ್ಯ ಮಾಡದೇ ಇರಲು ಸೂಕ್ತ ಆದೇಶ/ಸುತ್ತೋಲೆ ಹೊರಡಿಸುವುದು.
11. ಎಲ್ಲಾ ಸಕಾಲ ಸೇವೆಗಳ Back end process ಅನ್ನು ಮತ್ತು ಬದಲಾವಣೆಗಳನ್ನು ವಿನ್ಯಾಸಗೊಳಿಸಿ ದಿನಾಂಕ:25.03.2019 ರೊಳಗೆ ಜಾರಿಗೆ ತರುವುದು.

ಸಕಾಲ ಸೇವೆಗಳಲ್ಲಿ ಈ ಎಲ್ಲಾ ಬದಲಾವಣೆಗಳನ್ನು ಮಾನ್ಯ ಸಚಿವರ ಅವಗಾಹನೆಗೆ ತಂದು ಸಿಆಸು (ಇ-ಆಡಳಿತ) ಇಲಾಖೆಯಿಂದ ಅಧಿಸೂಚನೆಯನ್ನು ಹೊರಡಿಸಲು ಕಡತವನ್ನು ಮಂಡಿಸುವುದು.

**ಸಭೆಯ ಇತರ ವಿಷಯಗಳು:**

1. ಗ್ರಾಮ ಪಂಚಾಯತಿ ಆಸ್ತಿಗಳ ಡಿಮ್ಯಾಂಡ್ ಬಗ್ಗೆ ಆಸ್ತಿದಾರರಿಗೆ ಅವರ ಡಿಮ್ಯಾಂಡ್‌ನ ಬಾಕಿ ಬಗ್ಗೆ ಎಸ್.ಎಂ.ಎಸ್ ಕಳುಹಿಸಲು ಕ್ರಮವಹಿಸಲು ಪ್ರಧಾನ ಕಾರ್ಯದರ್ಶಿಗಳ ಆದೇಶವನ್ನು ರಾಜ್ಯ ಯೋಜನಾ ವ್ಯವಸ್ಥಾಪಕರು ಕೋರಿದರು.

   ಅದರಂತೆ ಪ್ರಧಾನ ಕಾರ್ಯದರ್ಶಿಗಳು ಇ-ಸ್ವತ್ತು ತಂತ್ರಾಂಶದ ಮೂಲಕ ನೋಂದಣಿಯಾಗಿರುವ ಆಸ್ತಿಗಳಿಗೆ ಮಾತ್ರ ಮೊದಲ ಹಂತದಲ್ಲಿ ಎಸ್.ಎಂ.ಎಸ್ ಕಳುಹಿಸಲು ಕ್ರಮ ವಹಿಸಲು ಸೂಚಿಸಿದರು.

2. ಪ್ರಸ್ತುತ ಕೆಲವೊಂದು ಆಸ್ತಿಗಳಿಗೆ ಮಾಲೀಕರು ಬದಲಾಗಿರುತ್ತಾರೆ. ಸದರಿ ಮಾಲೀಕರ ಬದಲಾವಣೆ ಎರಡಕ್ಕಿಂತ ಹೆಚ್ಚಾಗಿದೆ. ಆದರೆ ಸದರಿ ಬದಲಾವಣೆಗಳು ಇ-ಸ್ವತ್ತು ತಂತ್ರಾಂಶದಲ್ಲಿ ಆಗಿದೆ. ಆದರೆ ಪಂಚತಂತ್ರ ತಂತ್ರಾಂಶದಲ್ಲಿ ಸದರಿ ಬದಲಾವಣೆಗಳು ಆಗಿರುವುದಿಲ್ಲ. ಇದರಿಂದಾಗಿ ಆಸ್ತಿಗಳ ಡಿಮ್ಯಾಂಡ್ ತೆಗೆಯುವಾಗ ಹೊಸ ಮಾಲೀಕರ ಹೆಸರು ಅಪ್‌ಡೇಟ್ ಆಗಿರುವುದಿಲ್ಲ.

   ಎನ್.ಐ.ಸಿ ಅಧಿಕಾರಿಗಳು ಇ-ಸ್ವತ್ತು ತಂತ್ರಾಂಶದಲ್ಲಿರುವ ಮಾಲೀಕರ ಹೆಸರನ್ನು ಪಂಚತಂತ್ರದಲ್ಲಿ ಅಪ್‌ಡೇಟ್ ಮಾಡಲು ಕ್ರಮಕೈಗೊಳ್ಳಲು ಆದೇಶಕ್ಕೆ ಕೋರಿದರು. ಅದರಂತೆ ಪ್ರಧಾನ ಕಾರ್ಯದರ್ಶಿಗಳು ಅಪ್‌ಡೇಟ್ ಮಾಡಲು ಕ್ರಮಕೈಗೊಳ್ಳಲು ಆದೇಶಿಸಿದರು.

3. ನಮೂನೆ-9 ಅಥವಾ 11A ಮತ್ತು ನಮೂನೆ-11B ನ್ನು issue ಮಾಡಲು ಬಾಕಿ ತೆರಿಗೆ ಪಾವತಿಯನ್ನು ಕಡ್ಡಾಯಗೊಳಿಸಲು ಹಾಗೂ ಆಸ್ತಿ ಮಾಲೀಕರು ಬಾಕಿ ತೆರಿಗೆ ಪಾವತಿ ಮಾಡದಿದ್ದಲ್ಲಿ Form-9 ಅಥವಾ 11A ಮತ್ತು 11B ನ್ನು issue ಮಾಡದಂತೆ ಪಂಚತಂತ್ರ/ಇ-ಸ್ವತ್ತು ತಂತ್ರಾಂಶದಲ್ಲಿ ಮಾರ್ಪಾಡು ಮಾಡಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

ಅದರಂತೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸಮ್ಮತಿ ನೀಡಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/39/ಗ.ಕೋಶ/2019
ದಿನಾಂಕ:19.03.2019

19/03/2019

(ಎಲ್.ಕೆ. ಅತೀಕ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು.
2. ನಿರ್ದೇಶಕರು(ಪಂ.ರಾಜ್–1), ಗ್ರಾಅಪ ಇಲಾಖೆ, ಬೆಂಗಳೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
4. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ–ಪಂಚಾಯತ್), ಗ್ರಾಅಪ ಇಲಾಖೆ.
6. ತಾಂತ್ರಿಕ ಸಮಾಲೋಚಕರು(ಇ–ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
7. ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
8. IEC Co-ordinator, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅಪ ಇಲಾಖೆ, ಬೆಂಗಳೂರು.

ಪ್ರತಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.